ಪ್ರಧಾನ ಜಿಲ್ಲಾ ವ ಸತ್ರ ನ್ಯಾಯಾಧೀಶರು, ಧಾರವಾಡ ಹಾಗೂ ಆಡಳಿತಾಧಿಕಾರಿಗಳು,
ಶ್ರೀ ಮಾಲತೇಶ ದೇವಸ್ಥಾನ ಸಮಿತಿ, ದೇವರಗುಡ್ಡ, ತಾಃ ರಾಣೇಬೆನ್ನೂರು, ಜಿಃ ಹಾವೇರಿ

ತಿದ್ದುಪಡಿ ಅಧಿಸೂಚನೆ
ದಿನಾಂಕ 26.07.2025

ಈ ಆಡಳಿತ ಕಛೇರಿಯು ದಿನಾಂಕ 27.06.2025 ರಂದು ದೇವರಗುಡ್ಡ ಶ್ರೀ ಮಾಲತೇಶ ದೇವಸ್ಥಾನ ಸಮಿತಿಯ ಸದಸ್ಯರುಗಳನ್ನು ಮುಂದಿನ 5 ವರ್ಷಗಳ ಅವಧಿಯ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಿ ಆಸಕ್ತ/ಅರ್ಹ ಸಾರ್ವಜನಿಕ ಭಕ್ತರಿಂದ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 05.07.2025 ಕ್ಕೆ ನಿಗದಿಗೊಳಿಸಿ, ಸಂದರ್ಶನಕ್ಕಾಗಿ ದಿನಾಂಕ 13.07.2025 (ತಿದ್ದುಪಡಿ ಅಧಿಸೂಚನೆ ದಿನಾಂಕ 28.06.2025 ರನ್ವಯ) ಕ್ಕೆ ನಿಗದಿಗೊಳಿಸಿ ಮತ್ತು ದಿನಾಂಕ 14.07.2025 ರಂದು ಆಯ್ಕೆಗೊಂಡವರ ವಿವರವನ್ನು ಪ್ರಕಟಿಸಲಾಗುವುದು ಎಂದು ಅಧಿಸೂಚಿಸಿದ್ದು ಇರುತ್ತದೆ.

ಈ ಅಧಿಸೂಚನೆಗೆ ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡದ ಪೀಠದ ಪ್ರಕರಣ ಸಂಖ್ಯೆ ರಿಟ್ ಪಿಟೀಶನ್ 104279/2025 ರಲ್ಲಿ ದಿನಾಂಕ 03.07.2025 ರಂದು ತಡೆಯಾಜ್ಞೆಯನ್ನು ಮುಂದಿನ ಮುದ್ದತ್ತಿನ(ದಿನಾಂಕ 21.07.2025 ರ ವರೆಗೆ) ವರೆಗೆ ನೀಡಿದ್ದು ತದನಂತರದ ದಿನಾಂಕ ಅಂದರೆ ದಿನಾಂಕ 21.07.2025 ರಂದು ತಡೆಯಾಜ್ಞೆಯ ಆದೇಶವು ಮುಂದುವರೆದಿರುವುದಿಲ್ಲ. ಅಲ್ಲದೇ ದಿನಾಂಕ 21.07.2025 ರ ಆದೇಶದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಆಜ್ಞೆ ಮಾಡಿ ಈ ಆಡಳಿತ ಕಛೇರಿಗೆ ಅಧಿಸೂಚನೆಯ ಪ್ರಕ್ರಿಯೆಯನ್ನು ಮುಂದುವರೆಸಲು, ಸಂಬಂದಪಟ್ಟವರನ್ನು ಹಾಗೂ ಈ ಪ್ರಕರಣದ ಅರ್ಜಿದಾರರನ್ನು ವಿಚಾರಿಸಲು ಹಾಗೂ ಪ್ರಕರಣದ ಅರ್ಜಿದಾರರಿಗೆ, ಭಕ್ತರಿಗೆ, ಪ್ರಕರಣದಲ್ಲಿ ಕಕ್ಷಿದಾರರಾಗಿ ಸೇರ್ಪಡೆಗೊಂಡವರಿಗೆ ಅಧಿಸೂಚಿಸಿದ ದಿನಾಂಕಗಳನ್ನು ವಿಸ್ತರಿಸಿ ಅವಕಾಶ ಕಲ್ಪಿಸಲು ಸೂಚಿಸಿದ್ದರಿಂದ ಈ ಮೊದಲಿನ ಈ ಕಛೇರಿಯ ಅಧಿಸೂಚನೆಗೆ ಪೂರಕವಾಗಿ ಶ್ರೀ ಮಾಲತೇಶ ದೇವಸ್ಥಾನ ಸಮಿತಿಯ ಸದಸ್ಯರುಗಳ ಮುಂದಿನ 5 ವರ್ಷದ ಅವಧಿಯ ಆಯ್ಕೆಗಾಗಿ ಅರ್ಜಿ ಸಲ್ಲಿಸಲು ಈ ಅಧಿಸೂಚನೆ ಹೊರಡಿಸಲಾಗಿದೆ.

COURT OF THE PRL. DISTRICT JUDGE
ಪ್ರಧಾನ ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯ
ಧಾರವಾಡ
DHARWAD

ಸದ್ರಿ ದೇವಸ್ಥಾನ ಸಮಿತಿಯ ಬೈಲಾ ಪ್ರಕಾರ 10 ಜನ ಸಮಿತಿಯ ಸದಸ್ಯರು ಇರಬೇಕಾಗಿದ್ದು ಅದರಲ್ಲಿ ಒಬ್ಬರು ತಾಲೂಕು ತಹಸಿಲ್ದಾರ, ರಾಣೇಬೆನ್ನೂರು ಖಾಯಂ ಸದಸ್ಯರಾಗಿರುತ್ತಾರೆ.

ಅದೇ ರೀತಿ ಸದ್ರಿ ದೇವಸ್ಥಾನದ ಸಮಿತಿಯ ಬೈಲಾ ಪ್ರಕಾರ ಉಳಿದ 9 ಪಂಚರನ್ನು ಈ ಕೆಳಕಂಡಂತೆ ಆಯ್ಕೆ ಮಾಡಬೇಕಾಗಿರುತ್ತದೆ. ಬೈಲಾ ಅನ್ವಯ ದೇವಸ್ಥಾನ ಆಡಳಿತ ಕಮೀಟಿಯ ಆಡಳಿತಾಧಿಕಾರಿಯಾದ ಪ್ರಧಾನ ಜಿಲ್ಲಾ ವ ಸತ್ರ ನ್ಯಾಯಾಧೀಶರು, ಧಾರವಾಡ ಇವರು

1. ಈ ಕಮೀಟಿಗೆ ಇಬ್ಬರು ಸ್ಥಳಿಯ ಪಂಚರನ್ನು ಅಂದರೆ ದೇವರಗುಡ್ಡದಲ್ಲಿಯೇ ಖಾಯಂ ವಾಸವಾಗಿರುವವರನ್ನು ಆಯ್ಕೆ ಮಾಡಬೇಕಾಗಿರುತ್ತದೆ.
2. ಅದೇ ರೀತಿ ಈ ಕಮೀಟಿಗೆ ಇಬ್ಬರು ಪಂಚರನ್ನು ದೇವಸ್ಥಾನಕ್ಕೆ ದಾನವಾಗಿ (ಹಣದ ಮುಖಾಂತರವಾಗಲಿ ಅಥವಾ ಇನ್ನಾವದೇ ಆಸ್ತಿಯ ಮುಖಾಂತರವಾಗಲಿ, ಅಥವಾ ಧರ್ಮಶಾಲೆ ಅಥವಾ ಇನ್ನಿತರ ಕಟ್ಟಡವನ್ನು ದೇವಸ್ಥಾನದ ಭಕ್ತಾಧಿಗಳ ಉಪಯೋಗಕ್ಕಾಗಿ ವ ದೇವಸ್ಥಾನಕ್ಕೆ ಬರುವ ಭಕ್ತಾಧಿಗಳಿಗಾಗಿ) ನೀಡಿದವರನ್ನು ದೇವಸ್ಥಾನದಲ್ಲಿರುವ ದಾಖಲೆಗಳ ಆಧಾರದಡಿ ಆಯ್ಕೆ ಮಾಡಬೇಕಾಗಿರುತ್ತದೆ
3. ಇನ್ನು ಉಳಿದ ಇಬ್ಬರು ಪಂಚರನ್ನು ದೇವರಗುಡ್ಡ ಗ್ರಾಮ ಪಂಚಾಯಿತಿ ಕಮೀಟಿ ಸದಸ್ಯರಿಂದ ಆಯ್ಕೆ ಮಾಡಬೇಕಾಗಿರುತ್ತದೆ
4. ಉಳಿದ ಮೂವರು ಪಂಚರನ್ನು ವಿವಿಧ ಸಮೂದಾಯದ ದೇವಸ್ಥಾನದ ಭಕ್ತರುಗಳನ್ನು ಆಯ್ಕೆ ಮಾಡಬೇಕಾಗಿರುತ್ತದೆ. (ಇವರನ್ನು ಅಲ್ಲಿರುವ ಸ್ಥಳೀಯ ಅಧಿಕಾರಿಗಳನ್ನು ಅಗತ್ಯತೆಯನುಸಾರ ವಿಚಾರಣೆ ಮಾಡಿ ಮಾಡಬೇಕಾಗಿರುತ್ತದೆ).

ಈ ರೀತಿ ನೇಮಕಗೊಂಡವರು ಅವರ ನೇಮಕಾತಿ ದಿನಾಂಕದಿಂದ 5 ವರ್ಷ ದೇವಸ್ಥಾನ ಸಮೀತಿಯಲ್ಲಿ ಕಾರ್ಯ ಮಾಡಲು ಅರ್ಹರಾಗಿರುತ್ತಾರೆ. ಅದೇ ರೀತಿ ಅವರಲ್ಲಿ ಯಾರಾದರೂ ರಾಜೀನಾಮೆ ಕೊಟ್ಟರೆ ಅಥವಾ ಮರಣ ಹೊಂದಿದಲ್ಲಿ ಅಥವಾ ಯಾವುದೇ ಕಾರಣಗಳಿಗಾಗಿ ಅವರನ್ನು ಆಡಳಿತಾಧಿಕಾರಿ (ಯಾವುದೇ ದುವರ್ತನೆ ಬಗ್ಗೆ

COURT OF THE PRL. DISTR ಜಿಲ್ಲಾ ನ್ಯಾಯಾಧೀಶರ

ಸೂಕ್ತ ವಿಚಾರಣೆ ಮಾಡಿ) ವಜಾ ಮಾಡಿದರೆ ಬೈಲಾ ಪ್ರಕಾರ ಬೇರೆ ಪಂಚರನ್ನು ವಿಚಾರಣೆ ಮಾಡಿ ಆಯ್ಕೆ ಮಾಡಲಾಗುತ್ತದೆ.

ಆದ್ದರಿಂದ ಬೈಲಾ ಅನ್ವಯ ತಹಸೀಲ್ದಾರ, ರಾಣೇಬೆನ್ನೂರು ಒಬ್ಬ ಖಾಯಂ ಸದಸ್ಯರಿರುವುದರಿಂದ ಮೇಲೆ ಹೇಳಿದ ಉಳಿದ 9 ಜನ ಪಂಚರನ್ನು ಆಯ್ಕೆ ಮಾಡಲು ಈ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಕಾರಣ ಮೇಲೆ ತೋರಿಸಿದ 1ನೇ ವರ್ಗದಡಿ ಇಬ್ಬರು ಪಂಚರನ್ನು ಸದ್ರಿ ದೇವಸ್ಥಾನ ಸಮೀತಿಗೆ ಆಯ್ಕೆ ಮಾಡಲು ದೇವರಗುಡ್ಡದ ಸ್ಥಳೀಯ ನಿವಾಸಿಗಳಿಂದ ಅರ್ಜಿ ಅಹ್ವಾನಿಸಿದ್ದು, ಇಚ್ಛೆಯುಳ್ಳವರು ತಮ್ಮ ಸ್ವ-ವಿವರವುಳ್ಳ ಅರ್ಜಿಯನ್ನು ತಮ್ಮ ಅರ್ಜಿಗೆ ಪೂರಕವಾದ ದಾಖಲೆಗಳೊಂದಿಗೆ ವಿಸ್ತರಿಸಿದ ಅವಧಿಯೂದ ದಿನಾಂಕ **07.08.2025** ರ ಸಂಜೆ 6 ಗಂಟೆಯೊಳಗಾಗಿ ಪ್ರಧಾನ ಜಿಲ್ಲಾ ವ ಸತ್ರ ನ್ಯಾಯಾಲಯ, ಧಾರವಾಡ ಇಲ್ಲಿಗೆ ಸಲ್ಲಿಸಲು;

ಅದೇ ರೀತಿ ಮೇಲೆ ತೋರಿಸಿದ 2ನೇ ವರ್ಗದಡಿ ಹೇಳಿದ ಇಬ್ಬರು ಪಂಚರನ್ನು ಸದ್ರಿ ದೇವಸ್ಥಾನ ಸಮೀತಿಗೆ ಆಯ್ಕೆ ಮಾಡಲು ದೇವಸ್ಥಾನದಲ್ಲಿರುವ ದಾಖಲೆಗಳ ಆಧಾರದ ಮೇಲೆ ದೇವಸ್ಥಾನಕ್ಕೆ ದಾನ ಮಾಡಿರುವವರು ತಾವು ದಾನ ಮಾಡಿದ ದಾಖಲೆಗಳೊಂದಿಗೆ ತಮ್ಮ ಅರ್ಜಿಯನ್ನು ವಿಸ್ತರಿಸಿದ ದಿನಾಂಕ **07.08.2025** ರ ಸಂಜೆ 6 ಗಂಟೆಯೊಳಗಾಗಿ ಪ್ರಧಾನ ಜಿಲ್ಲಾ ವ ಸತ್ರ ನ್ಯಾಯಾಲಯ, ಧಾರವಾಡ ಇಲ್ಲಿಗೆ ಸಲ್ಲಿಸಲು;

ಅದೇ ರೀತಿ ಮೇಲೆ 3ನೇ ವರ್ಗದಡಿ ಹೇಳಿದ ಇಬ್ಬರು ಪಂಚರನ್ನು ಸದ್ರಿ ದೇವಸ್ಥಾನ ಸಮೀತಿಗೆ ಆಯ್ಕೆ ಮಾಡಲು ಇಚ್ಛೆಯುಳ್ಳ ದೇವರಗುಡ್ಡ ಗ್ರಾಮ ಪಂಚಾಯಿತಿಯ ಕಮೀಟಿಯ ಸದಸ್ಯರಿಗೆ ಪ್ರಧಾನ ಜಿಲ್ಲಾ ವ ಸತ್ರ ನ್ಯಾಯಾಲಯ, ಧಾರವಾಡ ಇಲ್ಲಿಗೆ ಅರ್ಜಿ ಸಲ್ಲಿಸಲು (ದಾಖಲೆಯೊಂದಿಗೆ) ವಿಸ್ತರಿಸಿದ ಅವಧಿಯೂದ ದಿನಾಂಕ **07.08.2025**ರ ಸಂಜೆ 6 ಗಂಟೆಯನ್ನು ನಿಗದಿ ಪಡಿಸಲಾಗಿದೆ.

ಅದೇ ರೀತಿ ಮೇಲೆ ತೋರಿಸಿದ 4ನೇ ವರ್ಗದಡಿ ಹೇಳಿದ ಉಳಿದ ಮೂವರು ಪಂಚರನ್ನು ವಿವಿಧ ಸಮೂದಾಯದ ದೇವಸ್ಥಾನದ ಭಕ್ತರುಗಳನ್ನು ಆಯ್ಕೆ ಮಾಡಬೇಕಾಗಿದ್ದು ಆ ಪ್ರಕಾರ ಇಚ್ಛೆಯುಳ್ಳ ದೇವಸ್ಥಾನದ ಭಕ್ತರು ವಿಸ್ತರಿಸಿದ ಅವಧಿಯೂದ

CT JUDGE ನ್ಯಾಯಾಲಯ ಧಾರವಾಡ DHARWAD

ದಿನಾಂಕ **07.08.2025** ರ ಸಂಜೆ **6** ಗಂಟೆಯೊಳಗಾಗಿ ತಮ್ಮ ಸ್ವ-ವಿವರವುಳ್ಳ ಅರ್ಜಿಯನ್ನು ಪೂರಕ ದಾಖಲೆಗಳ ಸಮೇತ ಪ್ರಧಾನ ಜಿಲ್ಲಾ ವ ಸತ್ರ ನ್ಯಾಯಾಲಯ, ಧಾರವಾಡ ಇಲ್ಲಿಗೆ ಸಲ್ಲಿಸಲು ಅಧಿಸೂಚಿಸಿದೆ.

ಮೇಲೆ ಹೇಳಿದ ನಾಲ್ಕು ಗುಂಪುಗಳ ಪೈಕಿ ಯಾವ ಗುಂಪಿಗೆ ಅರ್ಜಿದಾರರು ಅರ್ಜಿ (ತಮ್ಮ ಹೆಸರು, ಖಾಯಂ ವಿಳಾಸ, ಜನ್ಮ ದಿನಾಂಕ, ಉದ್ಯೋಗ, ಧರ್ಮ, ಜಾತಿ ಇತ್ಯಾದಿ ಮಾಹಿತಿಯೊಂದಿಗೆ ತಮ್ಮ ಇತ್ತೀಚಿನ ಭಾವ ಚಿತ್ರ) ಯನ್ನು ಸಲ್ಲಿಸುತ್ತಾರೋ ಅದಕ್ಕೆ ಸೂಕ್ತವಾದ ದಾಖಲೆಗಳನ್ನು ಸಹಾ ಸಲ್ಲಿಸಲು ಸೂಚಿಸಲಾಗಿದೆ.

ಮೇಲೆ ಹೇಳಿದ ಅರ್ಜಿ ಸ್ವೀಕರಿಸಲು ನಿಗದಿಪಡಿಸಿದ ವಿಸ್ತರಿಸಿದ ದಿನಾಂಕ, ವೇಳೆಯ ತದನಂತರ ಸ್ವೀಕೃತಗೊಂಡ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಈ ಪ್ರಕಾರ ಮೇಲೆ ಹೇಳಿದ 1 ರಿಂದ 4 ನೇ ವರ್ಗದಡಿ ಅರ್ಜಿ ಸಲ್ಲಿಸಿದ ಭಕ್ತರಿಗೆ ಸಂದರ್ಶನಕ್ಕಾಗಿ ದಿನಾಂಕ **10.08.2025** ರಂದು ಬೆಳ್ಳಿಗ್ಗೆ **9** ಘಂಟೆಗೆ ಧಾರವಾಡದ ಪ್ರಧಾನ ಜಿಲ್ಲಾ ನ್ಯಾಯಾಲಯದಲ್ಲಿ ನಿಗದಿಪಡಿಸಲಾಗಿದ್ದು ಆ ದಿನ ಅರ್ಜಿದಾರರು ತಮ್ಮ ಅರ್ಜಿಗೆ ಪೂರಕವಾದ ಮೂಲ ದಾಖಲೆಗಳೊಂದಿಗೆ ಹಾಜರಾಗಲು ಸೂಚಿಸಿದೆ.

<u>ಅರ್ಜಿದಾರರು ಸಲ್ಲಿಸಿದ ಅರ್ಜಿಗಳಲ್ಲಿ ಮೇಲೆ ನಮೂದಿಸಿದ ಯಾವ ವರ್ಗದಡಿ ಅರ್ಜಿ ಸಲ್ಲಿಸಲಾಗಿದೆ ಎಂದು ಸ್ಪಷ್ಟವಾಗಿ ನಮೂದಿಸಬೇಕು.</u>

ಸೂಚನೆ:- ಯಾವುದೇ ಅರ್ಜಿದಾರರು ತಮ್ಮ ಆಯ್ಕೆಗಾಗಿ ಆಡಳಿತಾಧಿಕಾರಿಯ ಮೇಲೆ ಯಾವುದೇ ತರಹದ ಅನಗತ್ಯ ಪ್ರಭಾವ ಬೀರಿದಲ್ಲಿ ಅದೇ ಕಾರಣದ ಮೇಲೆ ಅವರ ಅರ್ಜಿಯನ್ನು ವಜಾಗೊಳಿಸಲಾಗುವುದು ಹಾಗೂ ಅವರನ್ನು ನೇಮಕ ಮಾಡಲಾಗುವುದಿಲ್ಲ.

(ಬಿ ಎಸ್ ಭಾರತಿ)
ಪ್ರಧಾನ ಜಿಲ್ಲಾ ವ ಸತ್ರ ನ್ಯಾಯಾಧೀಶರು, ಧಾರವಾಡ
ಹಾಗೂ ಆಡಳಿತಾಧಿಕಾರಿಗಳು, ಶ್ರೀ ಮಾಲತೇಶ ದೇವಸ್ಥಾನ ಸಮಿತಿ,
ದೇವರಗುಡ್ಡ, ತಾಃ ರಾಣೇಬೆನ್ನೂರು, ಜಿಃ ಹಾವೇರಿ.

PRL. DISTRICT & SESSIONS JUDGE
DHARWAD

ಪ್ರತಿಯನ್ನು

1. ಶ್ರೀ ಪಿ ಎಸ್ ಮಂಜುನಾಥ, ಅಧ್ಯಕ್ಷರು, ಶ್ರೀ ಮಾಲತೇಶ ದೇವಸ್ಥಾನ ಸಮಿತಿ, ದೇವರಗುಡ್ಡ, ತಾಃ ರಾಣೇಬೆನ್ನೂರು, ಇವರಿಗೆ ದೇವಸ್ಥಾನ ಸಮಿತಿಯ ಸಂಪೂರ್ಣ ಪ್ರಭಾರೆಯನ್ನು ತಹಸಿಲ್ದಾರ, ರಾಣೇಬೆನ್ನೂರು (ಮಾಮಲೇದಾರ) ಇವರಿಗೆ ಕೂಡಲೇ ಹಸ್ತಾಂತರಿಸುವಂತೆ ಹಾಗೂ ಈ ಬಗ್ಗೆ ಈ ಆಡಳಿತ ಕಛೇರಿಗೆ ಮಾಹಿತಿ ಒದಗಿಸುವ ನಿರ್ದೇಶನದೊಂದಿಗೆ;

2. ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ಮಾಲತೇಶ ದೇವಸ್ಥಾನ ಸಮಿತಿ, ದೇವರಗುಡ್ಡ, ತಾಃ ರಾಣೇಬೆನ್ನೂರು, ಜಿಲ್ಲೆ ಹಾವೇರಿ ಇವರಿಗೆ ಈ ತಿದ್ದುಪಡಿ ಅಧಿಸೂಚನೆಯನ್ನು ಎರಡು ಕನ್ನಡ ಹಾಗೂ ಒಂದು ಇಂಗ್ಲೀಷ ಪತ್ರಿಕೆಯಲ್ಲಿ ಕೂಡಲೇ ಪ್ರಚುರಪಡಿಸಲು ಕ್ರಮ ಕೈಗೊಳ್ಳುವಂತೆ ಹಾಗೂ ಈ ತಿದ್ದುಪಡಿ ಅಧಿಸೂಚನೆಯ ಪ್ರತಿಗಳನ್ನು ದೇವಸ್ಥಾನದ ನೋಟೀಸು ಬೋರ್ಡಿಗೆ, ಸ್ಥಳೀಯ ಸಾರ್ವಜನಿಕ ಕಛೇರಿಗಳಲ್ಲಿ, ಬಸ್ ನಿಲ್ದಾಣ ಹಾಗೂ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ವ್ಯಾಪಕ ಪ್ರಚುರಗೊಳಿಸಲು ಹಾಗೂ ಈ ಬಗ್ಗೆ ಕ್ರಮಕೈಗೊಂಡ ಬಗ್ಗೆ ವರದಿಯನ್ನು ದಾಖಲೆಗಳೊಂದಿಗೆ ಈ ಆಡಳಿತ ಕಛೇರಿಗೆ ಕೂಡಲೇ ಸಲ್ಲಿಸುವಂತೆ ನಿರ್ದೇಶನದೊಂದಿಗೆ; ಹಾಗೂ

ದೇವಸ್ಥಾನಕ್ಕೆ ದಾನ ನೀಡಿದ ಭಕ್ತರ ಹೆಸರು, ವಿಳಾಸ, ದಾನದ ವಿವರಗಳ ಸಂಪೂರ್ಣ ವಿವರವನ್ನು ಈ ಕೂಡಲೇ ಸಲ್ಲಿಸುವ ನಿರ್ದೇಶನದೊಂದಿಗೆ;

3. ಗ್ರಾಮ ಪಂಚಾಯತಿ ಕಾರ್ಯದರ್ಶಿ/ಅಧಿಕಾರಿ(ಪಿ.ಡಿ.ಓ), ಗ್ರಾಮ ಪಂಚಾಯತಿ ಕಛೇರಿ, ದೇವರಗುಡ್ಡ, ತಾಃ ರಾಣೆಬೆನ್ನೂರು,–581 115, ಜಿಲ್ಲಾ ಹಾವೇರಿ ಇವರಿಗೆ ಗ್ರಾಮ ಪಂಚಾಯಿತಿ ಕಮೀಟಿಯ ಸದಸ್ಯರ ವಿವರಗಳನ್ನು ದಾಖಲೆಗಳೊಂದಿಗೆ ಕೂಡಲೇ ಈ ಕಛೇರಿಗೆ ಸಲ್ಲಿಸುವ ನಿರ್ದೇಶನದೊಂದಿಗೆ; ಹಾಗೂ

4. ತಹಸಿಲ್ದಾರ, ರಾಣೇಬೆನ್ನೂರು (ದೇವಸ್ಥಾನ ಕಮೀಟಿಯ ಮಾಮಲೇದಾರ) ಇವರಿಗೆ ಶ್ರೀ ಮಾಲತೇಶ ದೇವಸ್ಥಾನ ಸಮಿತಿಯ ಸಂಪೂರ್ಣ ಪ್ರಭಾರೆಯನ್ನು ಶ್ರೀ ಪಿ ಎಸ್ ಮಂಜುನಾಥ, ಅಧ್ಯಕ್ಷರು, ಶ್ರೀ ಮಾಲತೇಶ ದೇವಸ್ಥಾನ, ದೇವರಗುಡ್ಡ ಇವರಿಂದ ಪಡೆದು ಆ ಬಗ್ಗೆ ಈ ಆಡಳಿತ ಕಛೇರಿಗೆ ವರದಿ ಸಲ್ಲಿಸುವುದರೊಂದಿಗೆ ಈ

JUDGE ನ್ಯಾಯಾಲಯ ಧಾರವಾಡ DHARWAD

ಅಧಿಸೂಚನೆಯನ್ವಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಮಾಲತೇಶ ದೇವಸ್ಥಾನ ಸಮಿತಿ, ದೇವರಗುಡ್ಡ ಹಾಗೂ ಗ್ರಾಮ ಪಂಚಾಯಿತಿ ಕಾರ್ಯದರ್ಶಿ/ಅಧಿಕಾರಿ (ಪಿ ಡಿ ಒ) ಇವರು ಈ ಮೇಲೆ ನಿರ್ದೇಶಿಸಿದ ನಿರ್ದೇಶನದ ಸೂಕ್ತ ಪಾಲನೆಯ ಬಗ್ಗೆ ಸೂಕ್ತ ಮೇಲ್ವಿಚಾರಣೆ ಮಾಡಿ ವರದಿ ಸಲ್ಲಿಸಲು ಸಹ ನಿರ್ದೇಶಿಸಿದೆ.

5. ವಾರ್ತಾ ಮತ್ತು ಪ್ರಚಾರ ಇಲಾಖೆ, ಧಾರವಾಡ ಇವರಿಗೆ ವ್ಯಾಪಕ ಪ್ರಚಾರಕ್ಕಾಗಿ

(ಬಿ ಎಸ್ ಭಾರತಿ)
ಪ್ರಧಾನ ಜಿಲ್ಲಾ ವ ಸತ್ರ ನ್ಯಾಯಾಧೀಶರು, ಧಾರವಾಡ
ಹಾಗೂ ಆಡಳಿತಾಧಿಕಾರಿಗಳು, ಶ್ರೀ ಮಾಲತೇಶ ದೇವಸ್ಥಾನ ಸಮಿತಿ,
ದೇವರಗುಡ್ಡ, ತಾಃ ರಾಣೇಬೆನ್ನೂರು, ಜಿಃ ಹಾವೇರಿ.
PRL. DISTRICT & SESSIONS JUDGE
DHARWAD.

COURT OF THE PRL. DISTRICT JUDGE
ಧಾರವಾಡ ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯ
DHARWAD